ಕರ್ನಾಟಕ ಸರ್ಕಾರ
**ಸಾರ್ವಜನಿಕ ಶಿಕ್ಷಣ ಇಲಾಖೆಯ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ : ಜಂ.ನಿ(ಆ) ಖಾಯಂ.ಪೂ.ಸೇ.ಘೋ01/2021-22. ದಿನಾಂಕ : 07-01-2023

**ಜ್ಞಾಪನಾ**

ವಿಷಯ : ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಕಾರ್ಯಕ್ಷಮತೆ ಮತ್ತು ವಿಷಯ ಪರಿಣಿತಿಯನ್ನು ಹೊಂದಿರುವ ಬಗ್ಗೆ ಸಾಮಾನ್ಯ ಪರೀಕ್ಷೆಯನ್ನು ಹಮ್ಮಿಕೊಳ್ಳುವ ಕುರಿತು

ಉಲ್ಲೇಖ : ಈ ಕಛೇರಿಯ ಸಮಸಂಖ್ಯಾ ಪತ್ರ ದಿನಾಂಕ : 19-12-2022.

-*-*-*-*-*-

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಹಂತದ ಕಛೇರಿಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕಾರ್ಯಕ್ಷಮತೆ ಮತ್ತು ವಿಷಯ ಪರಿಣಿತಿ ಕುರಿತು ಏಕರೂಪದ ಸಾಮಾನ್ಯ ಪ್ರಶ್ನೆ ಪತ್ರಿಕೆ ನೀಡಿ Zoom ಮುಖಾಂತರ ನಡೆಸುವ ಪರೀಕ್ಷೆಗೆ ಎಲ್ಲಾ ಪೂರ್ವಸಿದ್ಧತೆಗಳನ್ನು ಕೈಗೊಳ್ಳುವಂತೆ ದಿನಾಂಕ : 19-12-2022 ರ ಜ್ಞಾಪನದಲ್ಲಿ ಸೂಚನೆ ನೀಡಲಾಗಿತ್ತು. ಈ ಹಿನ್ನಲೆಯಲ್ಲಿ ಪರೀಕ್ಷಾ ಕಾರ್ಯಗಳನ್ನು ಸೂಕ್ತವಾಗಿ ನಡೆಸಲು ಈ ಕೆಳಕಂಡ ಸೂಚನೆಗಳನ್ವಯ ಸೂಕ್ತ ಸಿದ್ಧತೆಗಳನ್ನು ಮಾಡಿಕೊಳ್ಳಲು ಸೂಚಿಸಿದೆ.

1. ವ್ಯಾಪ್ತಿಯ ಎಲ್ಲಾ ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಪರೀಕ್ಷೆಗೆ ಹಾಜರಾಗಲು ಆಯಾ ಕಛೇರಿ ಮುಖ್ಯಸ್ಥರುಗಳ ಮೂಲಕ ಸೂಚನೆ ನೀಡಿರುವ ಬಗ್ಗೆ ವರದಿ ನೀಡುವುದು.
2. ಪರೀಕ್ಷಾ ದಿನದಂದು ಸಕಾಲದಲ್ಲಿ Zoom Link ಮುಖಾಂತರ ಪ್ರಶ್ನೆಪತ್ರಿಕೆ ಲಭ್ಯಪಡಿಸಲಾಗುವುದು. ಅನಿವಾರ್ಯ ಸಂದರ್ಭಗಳಲ್ಲಿ ಪ್ರಶ್ನೆಪತ್ರಿಕೆಯ ಭೌತಿಕ ಪ್ರತಿಗಳನ್ನು ಮಾಡಿಕೊಂಡು Xerox ಪ್ರತಿಯನ್ನು ಪರೀಕ್ಷಾರ್ಥಿಗಳಿಗೆ ನೀಡುವ ಸಲುವಾಗಿ ಸೂಕ್ತ ವ್ಯವಸ್ಥೆ ಮಾಡಿಕೊಳ್ಳುವುದು. ಈ ಬಗ್ಗೆ ಸಕಾಲದಲ್ಲಿ ಈ ಮೇಲ್ ಮುಂಖಾಂತರ ಪ್ರಶ್ನೆ ಪತ್ರಿಕೆಯನ್ನು ಲಭ್ಯಪಡಿಸಲಾಗಿರುತ್ತದೆ. ಪರೀಕ್ಷಾ ಸಮಯದಲ್ಲಿ ತಾಂತ್ರಿಕ ಅಡಚಣೆಗಳು ಉಂಟಾದಲ್ಲಿ ಈ ಕಛೇರಿಯ "ಇ- ಆಡಳಿತ" ವಿಭಾಗವನ್ನು ತುರ್ತಾಗಿ ಸಂಪರ್ಕಿಸತಕ್ಕದ್ದು.
3. ಕೇಂದ್ರ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಅವರು ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಕೇಂದ್ರಗಳಲ್ಲೇ ಪರೀಕ್ಷೆ ತೆಗೆದುಕೊಳ್ಳಲು ಅನುವಾಗುವಂತೆ ಆಯಾ ಕಛೇರಿಗಳು ಕಾರ್ಯನಿರ್ವಹಿಸುತ್ತಿರುವ ಪ್ರದೇಶಕ್ಕೆ ಸಂಬಂಧಿಸಿದ ಆಯಾ ಜಿಲ್ಲಾ ಡಯಟ್‌ಗಳಲ್ಲಿ ವ್ಯವಸ್ಥೆಗೊಳಿಸಿರುವ ಬಗ್ಗೆ ಪರಿಶೀಲಿಸಿಕೊಳ್ಳುವುದು.
4. ವಿಭಾಗದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಮೇಲಿನಂತೆ ಹಮ್ಮಿಕೊಳ್ಳಲಾಗುವ ಪರೀಕ್ಷೆಗಳಿಗೆ ಸಂಬಂಧಪಟ್ಟ ಉತ್ತರ ಪತ್ರಿಕೆಗಳನ್ನು ಅದೇ ಜಿಲ್ಲೆಯಲ್ಲಿ ಮೌಲ್ಯಮಾಪನ ಮಾಡದೇ ಮತ್ತೊಂದು ಜಿಲ್ಲೆಗೆ ಹಂಚಿಕೆ ಮಾಡುವ ಕ್ರಮವನ್ನು ವಿಭಾಗೀಯ ಸಹನಿರ್ದೇಶಕರುಗಳು ನಿರ್ವಹಿಸತಕ್ಕದ್ದು. ಈ ಬಗ್ಗೆ ಸೂಕ್ತ ನಿರ್ದೇಶನಗಳನ್ನು ಡಯಟ್ ಪ್ರಾಂಶುಪಾಲರುಗಳಿಗೆ ನೀಡತಕ್ಕದ್ದು.
5. ಸಂಪೂರ್ಣ ಕಾರ್ಯಗಳನ್ನು ವ್ಯಾಪ್ತಿಯ ಜಿಲ್ಲೆಯ ಉಪನಿರ್ದೇಶಕರು (ಆಡಳಿತ), ಡಯಟ್ ಪ್ರಾಂಶುಪಾಲರು ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳ ಸಮನ್ವಯದಲ್ಲಿ ಹಮ್ಮಿಕೊಳ್ಳತಕ್ಕದ್ದು ಹಾಗೂ ವಿಭಾಗೀಯ ಸಹನಿರ್ದೇಶಕರು ಅಗತ್ಯ ಮೇಲುಸ್ತುವಾರಿ ಕಾರ್ಯಗಳನ್ನು ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು.

ಮೇಲಿನಂತೆ ಎಲ್ಲಾ ಪೂರ್ವಸಿದ್ಧತೆ ಕೈಗೊಂಡಿರುವ ಬಗ್ಗೆ ಮತ್ತು ವ್ಯಾಪ್ತಿಯಲ್ಲಿನ ಪರೀಕ್ಷಾರ್ಥಿಗಳ ಅಂಕಿ ಅಂಶಗಳು ಹಾಗೂ ಎಲ್ಲಾ ಮಾಹಿತಿಗಳನ್ನೂ ದೃಢೀಕರಿಸಿ ಕೂಡಲೇ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ. ಹಾಗೆಯೇ ಮೌಲ್ಯಮಾಪನಗೊಳಿಸಿ ಜಿಲ್ಲಾವಾರು ಅಂಕಿ ಅಂಶದ ವರದಿಯನ್ನು ಉಲ್ಲೇಖಿತ ಜ್ಞಾಪನದ ಸೂಚನೆಯಂತೆ ಸಕಾಲದಲ್ಲಿ ಸಲ್ಲಿಸುವುದು.

ಅನುಬಂಧ-1
ಪರೀಕ್ಷಾರ್ಥಿಗಳ ಅಂಕಿ ಅಂಶಗಳ ವರದಿ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಗುರ್ತಿಸಿರುವ ಪರೀಕ್ಷಾಕೇಂದ್ರಗಳ ಸಂಖ್ಯೆ | ಒಟ್ಟು ಕಾರ್ಯನಿರತ ಸಿಬ್ಬಂದಿ ಸಂಖ್ಯೆ | ಪರೀಕ್ಷೆಗೆ ಹಾಜರಾಗುವ ಸಿಬ್ಬಂದಿಗಳ ಸಂಖ್ಯೆ | ವ್ಯತ್ಯಾಸ | ಷರಾ |
|---|---|---|---|---|---|---|
| | | | | | | |

ಅನುಬಂಧ-2
ಮೌಲ್ಯಮಾಪನ ವರದಿ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಹಂಚಿಕೆ ಮಾಡಿದ ಜಿಲ್ಲೆಯ ಹೆಸರು | ಒಟ್ಟು ಪರೀಕ್ಷಾರ್ಥಿಗಳ ಸಂಖ್ಯೆ | ಶೇ 60 ಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿರುವ ಸಿಬ್ಬಂದಿಗಳ ಸಂಖ್ಯೆ (ವೃಂದವಾರು) | ಶೇ 60 ಕ್ಕಿಂತಲೂ ಕಡಿಮೆ ಅಂಕಗಳನ್ನು ಗಳಿಸಿರುವ ಸಿಬ್ಬಂದಿಗಳ ಸಂಖ್ಯೆ (ವೃಂದವಾರು) | ಷರಾ |
|---|---|---|---|---|---|---|
| | | | | | | |

ಆರ್. ವಿಶಾಲ್ ಭಾ.ಆ.ಸೇ
ಆಯುಕ್ತರು

**ಗೆ,**

1. ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರು
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) / ಅಭಿವೃದ್ಧಿ

**ಪ್ರತಿಯನ್ನು ಮಾಹಿತಿಗಾಗಿ:**

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
2. ಅಪರ ಆಯುಕ್ತರು, ಸಾ.ಶಿ.ಇಲಾಖೆ, ಕಲ್ಬುರ್ಗಿ ಮತ್ತು ಧಾರವಾಡ
3. ಮಾನ್ಯ ಆಯುಕ್ತರ ಆಪ್ತ ಶಾಖೆಗೆ.
4. ಜಂಟಿನಿರ್ದೇಶಕರು (ಆಡಳಿತ) ರವರ ಆಪ್ತ ಶಾಖೆಗೆ
5. ಕಛೇರಿ ಪ್ರತಿ.